1	2	3	4	5
18.	ರಾಣಿ ಬೆನ್ನೂರು ಕೃಷ್ಣಮೃಗ ಅಭಯಾರಣ್ಯ	ಧಾರವಾಡ	119.00	17-6-1974
19.	ಶರಾವತಿ ಅಭಯಾರಣ್ಯ	ಶಿವಮೊಗ್ಗ	431.23	27-6-1974
20.	ರಂಗನ ತಿಟ್ಟು ಪಕ್ಷಿಧಾಮ	ಮಂಡ್ಯ	0.67	1-7-1940
21.	ಶೆಟ್ಟ ಹಳ್ಳಿ ಅಭಯಾರಣ್ಯ	ಶಿವಮೊಗ್ಗ	395.60	23-11-1974
22.	ಸೋಮೇಶ್ವರ ಅಭಯಾರಣ್ಯ	ದಕ್ಷಿಣ ಕನ್ನಡ	8840.00	5-6-1974
23.	ತಲಕಾವೇರಿ ಅಭಯಾರಣ್ಯ	ಮಡಿಕೇರಿ	105.00	31-8-1987
24.	ಗುಡವಿ ಪಕ್ಷಿಧಾಮ	ಶಿವಮೊಗ್ಗ	0.73	10-7-1989
25.	ಅತ್ತಿವೇರಿ ಪಕ್ಷಿಧಾಮ	ಉತ್ತರ ಕನ್ನಡ	2.226	3-10-1994
26.	ದರೋಜಿ ಕರಡಿ ಧಾಮ	ಬಳ್ಳಾರಿ	55.873	17-10-1994.

ವಿಷಯ:- ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯರುಗಳ ಕೊರತೆ.

20(139)

ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯರುಗಳ ಕೊರತೆ ಎಷ್ಟು;
2. ಮೈಸೂರಿನ ಕೆ.ಆರ್. ಆಸ್ಪತ್ರೆ, ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಅನೇಕ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;
3. ಹಾಗಿದ್ದಲ್ಲಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು 725 ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ.
2. ಬಂದಿದೆ.
3. ಸರ್ಕಾರದ ಆದೇಶ ಸಂ. ಆಕುಕ 233 ಎಂಪಿಎಸ್ 96 ದಿನಾಂಕ 26-10-96 ರಲ್ಲಿ ವಾರ್ಷಿಕ 30 ಕೋಟಿ ರೂ.ಗಳನ್ನು ಮಂಜೂರು ಮಾಡಿ ಮೇಲ್ಕಂಡ ಆಸ್ಪತ್ರೆಗಳಲ್ಲಿ ಇರುವ ಕೊರತೆಯನ್ನು ನಿವಾರಿಸಲು ಸಿಬ್ಬಂದಿ ಹುದ್ದೆಗಳನ್ನು ಸೃಜಿಸಲು ಮತ್ತು ಅಗತ್ಯವಿರುವ ಸಾಧನ ಸಲಕರಣೆಗಳು, ಉಪಕರಣಗಳು ಇತರೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಜರುಗಿಸಲಾಗಿದೆ.